ವಧುವಿನತ್ತ ತಿರುಗಿಸಲು ಕಿ.ರಂ. ಅವರು, 'ಸರ್, ನೀವು ಪಂಪನ ಬಗ್ಗೆ ಏನು ಹೇಳುತ್ತೀರಿ?' ಎಂದು ಕೇಳಿದರು. 'ನಿನಗೇನು ಬೇಕು ಎಂದು ಗೊತ್ತು ನನಗ' ಎಂದು ಹೇಳುತ್ತಾ ಸಿಟ್ಟುಗೊಂಡ ಬೇಂದ್ರೆಯವರು, 'ನಾನು ಸಿದ್ಧಶಿಲೆಗೆ ಹೋಗುವನಲ್ಲ. ಸುಡುಗಾಡು ಸಿದ್ಧರ ಪಂಥದವನು' ಎಂದರಂತೆ. ಅದರ ಜೊತೆ 'ಕನ್ನಡ ನಾಡಿನಲ್ಲಿ ತಾನು ಇರಲು ಬಂದವನೇ ಹೊರತು ಹೋಗಲು ಬಂದವನಲ್ಲ' ಎಂದು ಕೂಡಾ ಹೇಳಿದರಂತೆ.

ಅದು ಬಹಳ ವ್ಯಾಪ್ತಿಯುಳ್ಳ ಮಾತು. ಆದರೆ ನಮ್ಮ ವಸ್ತುವಿಗೆ ಸಂಬಂಧಿಸಿದಂತೆ ಹೇಳಬೇಕಾದರೆ, ಜೈನರಲ್ಲಿ ಸಿದ್ಧದಶಿಲೆಯನ್ನು 'ಸಮವಸರಣ ಮಂಟಪ' ಎಂದೂ ಹೇಳುತ್ತಾರೆ. ಅಲ್ಲಿಂದ ತೀರ್ಥಂಕರರು ನೀಡುವ ಸಂದೇಶ ಸರ್ವಭಾಷಾಮಯಿ. ಅಂದರೆ ಅವರವರಿಗೆ ಅವರವರ ಭಾಷೆಯಲ್ಲಿ ಅರ್ಥವಾಗುವಂತಹುದು. ಉದಾ. ಕನ್ನಡದವರಿಗೆ ಕನ್ನಡ, ತಮಿಳು, ಹಿಂದಿ, ಮಲಯಾಳಂನವರಿಗೆ ಅವರವರ ಭಾಷೆಯಲ್ಲಿ. ಸಿದ್ಧಶಿಲೆಯ ಸ್ಥಿತಿ ಮುಂದೆ ಹುಟ್ಟಿಲ್ಲದ, ಸಾವಿಲ್ಲದ ಸ್ಥಿರ. ಅದು ಮೂರ್ತ, ಅಮೂರ್ತ ಯಾವುದೇ ಸ್ಥಿತಿಯಲ್ಲಿರಲಿ; ಪಂಚೇಂದ್ರಿಯಗಳ ಪ್ರಪಂಚಕ್ಕೆ ಬದ್ಧವಾದುದಲ್ಲ. ಬೇಂದ್ರೆಯವರ ಗ್ರಹಿಕೆ ಮೊದಲು ಮತ್ತು ಮೂಲಭೂತವಾಗಿ ಐಂದ್ರಿಕ ಪ್ರಪಂಚಕ್ಕೆ ಬದ್ಧವಾಗಿ, ಆ ಗ್ರಹಿಕೆಯಿಂದ ಮುಂದೆ ಸೌಂದರ್ಯದ ಇತರ ಮುಖಗಳನ್ನು ಅರಸುವಂತಹುದು. ಅಂತಹ ಪಂಚೇಂದ್ರಿಯಗಳ ಲೋಕ ಸದಾ ಅವರಿಗೆ ಇರುವುದರಿಂದಲೇ, 'ಸಖೀಗೀತ'ದ ನಾಯಕ ಅಲ್ಲಿಯ ನಾಯಿಕೆ ಸಾರುವ 'ಬೇಟದ ಕೂಟದ ಸುಸಮಾಧಿಯು' ಎಂಬ ಮಾತನ್ನು ಅರಿಯಬಲ್ಲವನೂ ಆಗಿದ್ದಾನೆ. ಈ ಹಿನ್ನೆಲೆಯಲ್ಲಿ ನಾವು 'ಮಾಯಾಕಿನ್ನರಿ' ಕವನಕ್ಕೆ ಕವಿಯೇ ನೀಡಿರುವ ಭಾವ ಸಂದರ್ಭವನ್ನು ಗ್ರಹಿಸಬೇಕು.

ಬೇಂದ್ರೆಯವರ ಪ್ರಕಾರ 'ಮಾಯಾಕಿನ್ನರಿ'ಯ ಹಿನ್ನೆಲೆಗೆ ಒಂದು ಕಥೆ ಇದೆ. ಅವರು ಹೇಳಿರುವಂತೆ: "ಕಾಡಸಿದ್ಧ-ಮರುಳಸಿದ್ಧ ಎಂಬ ಮಹಾತ್ಮರೊಬ್ಬರು ಉತ್ತರ ದಿಗ್ವಿಜಯ ತೀರಿಸಿ ದಕ್ಷಿಣದಲ್ಲಿ ಕರ್ನಾಟಕಕ್ಕೆ ಬಂದರು. ಆಗ ಕೊಲ್ಲಾಪುರದ ಮಾಯೆಯೆಂಬ ಯೋಗಿನಿಯು ಸಾವಿರ ಯೋಗಿಗಳನ್ನು ಸೋಲಿಸಿ ತನ್ನ ಮನೆಯಲ್ಲಿ ಊಳಿಗದಾಳುಗಳನ್ನಾಗಿ ಕೆಲಸಕ್ಕೆ ಹೂಡಿದುದನ್ನು ಕೇಳಿದರು. ಮಾಯೆಯೊಡನೆ ಇವರ ವಾಗ್ವಾದವು ಅನೇಕ ದಿನ ನಡೆದು ಮಾಯೆಯು ಎಲ್ಲ ವಿಷಯದಲ್ಲಿ ಸಿದ್ಧರಿಗೆ ಸೋತಳು. ಅದರಿಂದ ಅವಳು ಕುಪಿತಳಾಗಿ ಮಂತ್ರ-ತಂತ್ರದಿಂದಾದರೂ ಅವರನ್ನು ಗೆಲ್ಲಲು ಹವಣಿಸಿದಳು. ಸಿದ್ಧರು ಮಾಯೆಯನ್ನೆ ಮಂತ್ರಬಲದಿಂದ ಕಿನ್ನರಿಯನ್ನಾಗಿ ಮಾಡಿ ಹೊತ್ತುಕೊಂಡು ಹೊರಟರು. ಮೊದಲ ಸಲ ಆ ಕಿನ್ನರಿಯನ್ನು ಬಾರಿಸಬೇಕೆಂದಾಗ ಪ್ರಣಯ ಕುಪಿತ ಮಾನಿನಿಯಂತೆ ಅದು ಸಿಡಿಮಿಡಿಗೊಂಡಿತು, ಶ್ರುತಿಗೊಡಲಿಲ್ಲ; ಆಗ ಸಿದ್ಧರು ಮಾನಿನಿಯನ್ನು ಒಲಿಸಿಕೊಳ್ಳುವಂತೆ ಮಾಯೆಯನ್ನು ಒಲಿಸಿಕೊಳ್ಳಲು, ಗೆಜ್ಜೆ-ಪೈಜಣ ಕಟ್ಟಿದ ಮಾಯೆಯೆ ಕಿನ್ನರಿಯ ಮೈಯಲ್ಲಿ ನಿಂತು ಜಗವು ಬೆರಗಾಗುವಂತೆ ದಿವ್ಯ ಸಂಗೀತವನ್ನು ಹೊರಸೂಸಿದಳು" ('ಸಖೀಗೀತ' ಎರಡನೇ ಮುದ್ರಣ-1946. ಮಾಧವ ಸನ್ಸ್ ಬೆಂಗಳೂರು ಪ್ರಕಟಣೆ)

ಅಂಬಿಕಾತನಯದತ್ತರ ಕಾವ್ಯದಲ್ಲಿ ಏಕತಾರಿಯ ಸಂದರ್ಭಗಳು ಅನೇಕ ಸಾರಿ ಬಂದರೂ ಕಿನ್ನರಿಯ ಚಿತ್ರ ಬಹಳ ಕಡಿಮೆ. ಇಲ್ಲಿಯೂ ಭಾವ ಸಂದರ್ಭದ ಸಮಗ್ರ ಕತೆಯೇ ಒಂದು ರೂಪಕ. ಕಥನದಲ್ಲಿ ಕಿನ್ನರಿಯ ಪ್ರತಿಮೆ ಸಮರ್ಥ ಸಂಕೇತವಾಗಿ ಕೆಲಸ ಮಾಡುತ್ತದೆ. 'ನನ್ನ ಕಿನ್ನರಿ' ('ಗರಿ' ಸಂಕಲನ) ಕವನವಲ್ಲದೆ ಕಿನ್ನರಿ ಕಿನ್ನರರ ಇನ್ನೊಂದು ಮುಖ್ಯ ಉಲ್ಲೇಖ ನೆನಪಾಗುವುದು 'ಸಖೀ ನಮ್ಮ ಸಖ್ಯದ ಆಖ್ಯಾನ' ಎಂಬ ಕವನದಲ್ಲಿ. ('ಮತ್ತೆ ಶ್ರಾವಣ ಬಂತು' -1973- ಸಂಕಲನದಲ್ಲಿದೆ. 'ಸಖೀಗೀತ'ದ ನಂತರ ಬೇಂದ್ರೆಯವರು ಬರೆದ ಅವರ ಬಾಲ್ಯದ ಬಗೆಗಿನ 'ಬಾಲ್ಯಕಾಂಡ' ಖಂಡ ಕಾವ್ಯವೂ ಈ ಸಂಕಲನದಲ್ಲಿದೆ). 'ಸಹಜಕ್ಕೆ ಬೇಕಿಲ್ಲಾ ಹುಸಿ ಧ್ಯಾನಾ ' ಎನ್ನುವ ಕವಿ ಹೇಳುವುದು:

ನೀನಾಗು ಕಿನ್ನರಿ, ನಾನು ಕಿನ್ನರನಾಗಿ
ಬಾರಿಸಿ ನೋಡುವೆ ಸಂಧಾನಾ
ನೀ ದೇವ ಗಾಂಧಾರಿ ದೇವ ಗಂಧರ್ವ ನಾ
ದನಿ ಎತ್ತಿ ಹೇಳುವೆ ನವ ಗಾನಾ.